ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 707

ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 19-02-2018

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
1	ರಾಜ್ಯ ಸರ್ಕಾರ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳಿಗೆ ಕುವೆಂಪುರವರ ಕುಪ್ಪಳ್ಳಿ-ಕವಿಶೈಲ ಸ್ಮಾರಕದಂತೆ, ಅವರ ಹುಟ್ಟೂರುಗಳಲ್ಲಿ ಸ್ಮಾರಕ ನಿರ್ಮಾಣ ಮಾಡುವುದಾಗಿ ಘೋಷಿಸಿದ್ದು ನಿಜವೇ; (ಮಾಹಿತಿ ನೀಡುವುದು)	ಹೌದು. 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕವಿಶೈಲ ಮಾದರಿಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಇವರ ಜನ್ಮಸ್ಥಳ / ಮನೆಗಳ ಅಭಿವೃದ್ಧಿಗೆ ರೂ.1.00 ಕೋಟಿ ಅನುದಾನ ಒದಗಿಸಲಾಗುವುದು ಎಂದು ಘೋಷಿಸಿದ್ದು, ಕವಿಗಳ ಜನ್ಮಸ್ಥಳ / ಮನೆಗಳ ಅಭಿವೃದ್ಧಿಯ ರೂ.1.00 ಕೋಟಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 256 ಕಸಧ 2015, ದಿನಾಂಕ: 04.07.2015ರಲ್ಲಿ ತಾತ್ವಿಕ ಅನುಮೋದನೆ ನೀಡಲಾಗಿದೆ.
2	ಇದುವರೆವಿಗೂ ಸರ್ಕಾರ ಎಷ್ಟು ಜನ ಕವಿಗಳ ಜನ್ಮಸ್ಥಳಗಳಲ್ಲಿ ಸ್ಮಾರಕ ನಿರ್ಮಿಸಿದೆ; ಈ ಕಾರ್ಯಕ್ರಮಕ್ಕೆ ನಿಗದಿಯಾದ ಹಣವೆಷ್ಟು ಹಾಗೂ ಬಳಕೆಯಾದ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)	ಸ್ಮಾರಕಗಳನ್ನು ನಿರ್ಮಿಸಿರುವುದಿಲ್ಲ. 2017-18ನೇ ಸಾಲಿನಲ್ಲಿ ರೂ.50.00 ಲಕ್ಷಗಳನ್ನು ಅವಕಾಶ ಮಾಡಿಕೊಳ್ಳಲಾಗಿದ್ದು, ಈ ಮೊತ್ತ ಬಳಕೆಯಾಗಿರುವುದಿಲ್ಲ.
3	ನಮ್ಮ ಹೆಮ್ಮೆಯ ಕವಿಗಳ ಹುಟ್ಟೂರುಗಳಲ್ಲಿ ಸ್ಮಾರಕ ನಿರ್ಮಿಸಲು ಉಂಟಾಗಿರುವ ಅಡೆತಡಗಳೇನು; ಪ್ರತಿ ಕವಿಗಳ ಹುಟ್ಟೂರಿನಲ್ಲಿ ತಲೆದೋರಿರುವ ಸಮಸ್ಯೆಗಳ ವಿವರ ನೀಡುವುದು;	ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಜನ್ಮಸ್ಥಳಗಳಲ್ಲಿನ ನಿವಾಸಗಳನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸಲು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕವಿಗಳ ಕುಟುಂಬ ವರ್ಗದವರಲ್ಲಿ ದ.ರಾ. ಬೇಂದ್ರೆ ಕುಟುಂಬದವರು ಸಮ್ಮತಿಸಿರುವುದಿಲ್ಲ. ಉಳಿದ ಕವಿಗಳ ಕುಟುಂಬವರ್ಗದವರನ್ನು ಸಂಪರ್ಕಿಸಿ ಸ್ಮಾರಕಗಳನ್ನು ನಿರ್ಮಾಣ ಮಾಡಲು ಕ್ರಮ ವಹಿಸಲಾಗುತ್ತಿದೆ.
4	ಅಡೆತಡೆಗಳನ್ನು ನಿವಾರಿಸಿ, ಸರ್ಕಾರ ರಾಜ್ಯದ ಹೆಮ್ಮೆಯ ಕವಿಗಳ ಸ್ಮಾರಕ ನಿರ್ಮಿಸಲು ಮುಂದಾಗುವುದೇ; ಯಾವ ಕಾಲಮಿತಿಯಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು? (ವಿವರ ನೀಡುವುದು)	ಹೌದು. ಈ ಯೋಜನೆಗೆ ಕಾಲಮಿತಿ ಹಾಕಿಕೊಂಡಿಲ್ಲ. ಕುಟುಂಬ ವರ್ಗದವರು ಸ್ಮಾರಕ ನಿರ್ಮಿಸಲು ಸಮ್ಮತಿಸಿದಲ್ಲಿ, ಆದರಂತೆ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಸಂವಾ 15 ಕವಿಸ 2018

(ಉಮಾಶ್ರೀ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.